SRI AZEEZ SAIT—I beg to Introduce the Karnataka Industrial Areas Development (Amendment) Bill, 1978.

MR. SPEAKER—The Bill is introduced * *

Statement by the Minister for Revenue.

re : Election to the Local Bodies in the State.

ಶ್ರೀ ಎಸ್.ಆರ್. ಬೊಮ್ಮಾಯಿ—ಸ್ವಾಮಿ, ನಿನ್ನೆ ದಿವಸ ನಡೆದ ವಿಚಾರದ ಬಗ್ಗೆ ಮಾನ್ಯ ರೆವಿನ್ಯೂ ಮಂತ್ರಿಗಳು ಈ ಸದನದಲ್ಲಿ ಈಗ ಬಂದು ಉತ್ತರವನ್ನು ನಮಗೆ ಕೊಡಬೇಕು.

† ಶ್ರೀ ಬಿ. ಬಸವಲಿಂಗಪ್ಪ. (ಸಂದಾಯ ಶಾಖೆಯ ಮಂತ್ರಿಗಳು)—ಮಾನ್ಯ ಸಭಾಪತಿಯವರೆ, ನಿನ್ನೆ ದಿವಸ ಈ ಸದನದಲ್ಲಿ ನಾನೂ ಪ್ರಸ್ತುತ ಮಾನ್ಯ ವಿರೋಧಪಕ್ಷದ ನಾಯಕರೂ ಇಬ್ಬರೂ ಒಂದು ಹೇಳಿಕೆಯನ್ನು ಕೊಟ್ಟಿದ್ದೆವು. ಬಹುಶಃ ಅವರು ಅದರಿಂದ ಸಮಾಧಾನವಾಗಿದ್ದಾರೆಂದು ನಾನು ತಿಳಿದು ಕೊಂಡಿದ್ದೆ. ಆದರೆ ಪುನಃ ಇವತ್ತು ಸೇಳಿಕೆಯನ್ನು ಕೊಡಬೇಕೆಂದು ನನ್ನನ್ನು ಕೇಳುತ್ತಿದ್ದಾರೆ. ಅದುದರಿಂದ ನಾನು ಈಗ ಹೇಳಿಕೆಯನ್ನು ಕೊಡಬೇಕಾಗಿದೆ. ಚುನಾವಣಾ ಆಯೋಗದವರು ಇದುವರೆಗೂ ಕ್ಯಾಲೆಂಡರ್ ಆಫ್ ಇವೆಂಟ್ಸ್ ಹಾಕಿಲ್ಲ. ಅವರು ಹಾಗೆ ಕ್ಯಾಲೆಂಡರ್ ಆಫ್ ಇವೆಂಟ್ಸ್ ಹಾಕದೇ ಇರುವಾಗ ನಾವೇ ಅವರನ್ನು ಹಾಗೆ ಮಾಡಿ, ಹೀಗೆ ಮಾಡಿ, ಎಂದು ಹೇಳುವುದಕ್ಕಾಗುವುದಿಲ್ಲ. ಅವರು ಅದನ್ನು ಹಾಕಿದಾಗ ನೋಡೋಣ. ಈಗ ಪಶ್ಚಿಮಸಭಾ ಚುನಾವಣೆಗಳನ್ನು ಮುಂದಕ್ಕೆ ಹಾಕಿರುವ ವಿಷಯ ತಮಗೆಲ್ಲಾ ಗೊತ್ತೇ ಇದೆ. ಈಗ ಹೈಕೋರ್ಟಿನಲ್ಲಿ ಏನು ರಿಟ್ ಅರ್ಜಿಗಳನ್ನು ಹಾಕಿದ್ದಾರೆ ಅವುಗಳನ್ನು ಆದಷ್ಟು ಜಾಗ್ರೆ ಇತ್ಯರ್ಥ ಮಾಡಬೇಕೆಂದು ನಾವೂ, ನೀವೂ ಇಬ್ಬರೂ ಒಪ್ಪಿದ್ದೇವೆ.

(ಶ್ರೀ ಎಂ.ಪಿ. ನಾರಾಣಯ್ಯನವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಎಲೆಕ್ಷನ್ ಮುಂದಕ್ಕೆ ಹಾಕುವ ಬಗ್ಗೆ ಕ್ಯಾಲೆಂಡರ್ ಆಫ್ ಇವೆಂಟ್ಸ್ ಬಂದಾಗ ಯೋಚನೆ ಮಾಡೋಣ. ಅದಕ್ಕೆ ಸಾಕಷ್ಟು ಅವಕಾಶವಿದೆ. ಈಗಲೇ ಅದರ ಬಗ್ಗೆ ಹೇಳಲೇಬೇಕೆಂದು ಏನಾದ ಮಾಡಿದರೆ ಅದು ಸರಿಯೋ ತಪ್ಪೋ ನನ್ನ ತಿಳಿವಳಿಕೆಗೆ ಸಮಪರಿಕೆಯಾಗುತ್ತಿಲ್ಲ. ಕ್ಯಾಲೆಂಡರ್ ಆಫ್ ಇವೆಂಟ್ಸ್ ಹಾಕಿದಾಗ ನೀವು ಮುಂದಕ್ಕೆ ಹಾಕುತ್ತೀರಿ ಎಂದು ಏನು ಹೇಳುತ್ತಿದ್ದೀರಿ ಅದು ಸರಿಯಿಲ್ಲ ವೆಂದು ನನಗನಿಸುತ್ತದೆ. ಮತ್ತೆ ನಿನ್ನೆ ನಡೆದಂಥ ಮಾತುಕತೆಗಳಲ್ಲಿಯೂ ಕೂಡ ಒಪ್ಪಿಕೊಂಡು ಬಂದಿದ್ದೇವೆ, ಆದರ ಪ್ರಕಾರ ನಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ ಎಸ್.ಆರ್. ಬೊಮ್ಮಾಯಿ—ಸ್ವಾಮಿ ಮಾನ್ಯ ಮಂತ್ರಿಗಳು ನಿನ್ನೆ ನಡೆದ ವಿಚಾರದ ಬಗ್ಗೆ ಹೇಳಿಕೆಯನ್ನು ಕೊಡುತ್ತಾ ಸ್ಪಷ್ಟವಾಗಿ ಏನು ನಡೆದಿದ ಎಂದು ಹೇಳಿದ್ದರಿ ಅದಕ್ಕೆ ನಾನು ಅಭಿನಂದಿಸ ಬೇಕೆಂದು ಆತುರದಿಂದ ಕಾದು ಕುಳಿತಿದ್ದೆ. ನನಗೆ ತಿಳಿದಮಟ್ಟಿಗೆ ಹೇಳುವುದಾದರೆ ಚೀಫ್ ಎಲೆಕ್ಷನ್ ಆಫೀಸರ್ ಈಗಾಗಲೇ ಎಲೆಕ್ಷನ್ ಕಮಿಷನರ್‌ರವರಿಗೆ ಬರೆದಿದ್ದಾರೆ ಸ್ಪಷ್ಟವಾಗಿ ಜುಲೈ ೨೮ ರೊಳಗೆ ಸಂಘ ಸಂಸ್ಥೆಗಳಿಗೆ ಚುನಾವಣೆಯಾಗಬೇಕೆಂದು. ಟೀಚರ್ ಕಾನಸ್ಟಿಟ್ಯೂಯೆನ್ಸಿ ಗ್ರಾಜ್ಯುಯೇಟ್ಸ್ ಮತ್ತು ಲೋಕಲ್ ಅಥಾರಿಟಿ ಸದಸ್ಯರ ಅವಧಿಯು ಜೂನ್ ೨೫ ರೊಳಗೆ ಮುಗಿಯುವುದಿದೆ. ಟೀಚರ್ ಮತ್ತು ಗ್ರಾಜ್ಯುಯೇಟ್ಸ್ ಕಾನಸ್ಟಿಟ್ಯೂಯನ್ಸಿ ಚುನಾವಣೆಯು ೨೮ನೇ ಜೂನ್ ಒಳಗೆ ಮುಗಿದು ಹೊಸ ಸದಸ್ಯರು ಬರಬೇಕಾಗಿರುತ್ತದೆ. ಈಗ ಏನಾಗಿದೆ ಎಂದರೆ ಚೀಫ್ ಎಲೆಕ್ಷನ್ ಆಫೀಸರ್ ಪತ್ರ ಬರೆದು ರಾಜ್ಯದಲ್ಲಿ ಮುನಿಸಿಪಲ್ ಎಲೆಕ್ಷನ್ ಈಗಾಗಲೇ ಆಗುತ್ತಾ ಇದ್ದು ಅಲ್ಲಿಂದ ಆರಿಸಿ ಬಂದ ಸದಸ್ಯರಿಗೆ ಅವಕಾಶ ಕೊಡಬೇಕು ಎನ್ನುವ ಉದ್ದೇಶದಿಂದ ಚುನಾವಣೆಯನ್ನು ಜುಲೈನಲ್ಲಿ ಮಾಡಬೇಕು ಎನ್ನುವ ಸೂಚನೆ ಕೊಟ್ಟಿರುತ್ತಾರೆ ಎನ್ನುವುದು ನಮಗೂ ಗೊತ್ತಿರುತ್ತದೆ. ಇಲ್ಲದಿದ್ದರೆ ಜೂನ್ ೩೦ರಲ್ಲಿಯೇ ಈ ಎಲೆಕ್ಷನ್ ಆಗಬೇಕಾಗಿತ್ತು. ಒಂದು ಸಲ ಎಲೆಕ್ಷನ್ ಕಮಿಷನ್ ನೋಟಿಫಿಕೇಷನ್ ಆಗಿಬಿಟ್ಟಮೇಲೆ ಮುಂದೆ ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ಎತ್ತಿದ ಪ್ರಶ್ನೆಯ ಮೂಲ ಉದ್ದೇಶವೇನೆಂದರೆ ಕೌನ್ಸಿಲ್ ಎಲೆ

* * Bill is appended as Annexure to this Volume.

ಕ್ಷನ್‌ನ್ನು ಮುಂದೆ ಹಾಕುವುದಿಲ್ಲ ಎನ್ನುವುದು ಸ್ಪಷ್ಟಪಟ್ಟಿದ್ದರೆ ಹೈಕೋರ್ಟಿನಲ್ಲಿರತಕ್ಕಂಥ ಪ್ರಕರಣಗಳನ್ನು ತ್ವರಿತವಾಗಿ ಮುಗಿಸತಕ್ಕಂಥದ್ದು ಒಂದು, ಎರಡನೆಯದಾಗಿ ಎಲೆಕ್ಷನ್ ಕಮೀಷನರ್‌ರವರಿಗೆ ಯಾವರೀತಿ ರಿಕ್ವಿಸ್ಟ್ ಮಾಡಬೇಕು ಎನ್ನುವುದು ಪತ್ರದ ಮುಖೇನ ಕಾನ್‌ಫಿಡೆನ್‌ಶಿಯಲ್ ಆಗಿ ಬರೆದು ವಿನಂತಿ ಮಾಡಿಕೊಳ್ಳಬಹುದು. ಇದರ ಬಗ್ಗೆ ನಿನ್ನೆ ನಡೆದ ಮಾತುಕತೆಗಳಲ್ಲಿ ನಾವು ಒಪ್ಪಿಕೊಂಡಿದ್ದೇವೆ. ಮುನಿಸಿಪಲ್ ಚುನಾವಣೆಗಳು ಆಗುವವರೆಗೂ ಕೌನ್ಸಿಲ್ ಚುನಾವಣೆಯನ್ನು ಮುಂದಕ್ಕೆ ಹಾಕಬೇಕು. ಈ ಪಾದವನ್ನು ತಾವು ಒಪ್ಪಿಕೊಳ್ಳದಿದ್ದರೆ ಮೂಲ ಉದ್ದೇಶವನ್ನೆ ಬದಲಾಯಿಸಿದಂತಾಗುತ್ತದೆ. ತಮಿಳ್‌ನಾಡಿನಲ್ಲಿಯೂ ಎರಡು ವರ್ಷಗಳಿಂದ ಚುನಾವಣೆಗಳು ನಡೆದಿಲ್ಲ. ಪ್ರತಿಸಭೆಗಳ ಚುನಾವಣೆಯಾಗದೆ ಇರುವುದರಿಂದ ಕೌನ್ಸಿಲ್ ಚುನಾವಣೆಯನ್ನು ಮುಂದೂಡಿದ್ದಾರೆ. ಹಾಗೆಯೇ ಆಂಧ್ರ ಪ್ರದೇಶದಲ್ಲಿಯೂ ಮಾಡಿದ್ದಾರೆ. ಆದೇ ರೀತಿಯಲ್ಲಿ ಇಲ್ಲಿಯೂ ಕೂಡ ಕೌನ್ಸಿಲ್ ಚುನಾವಣೆಯನ್ನು ಮುಂದೆ ಹಾಕುವುದಕ್ಕೆ ಯಾವರೀತಿ ಮುಂದೆ ಹಾಕಬೇಕು ಎನ್ನುವುದರ ಬಗ್ಗೆ ಎಲೆಕ್ಷನ್ ಕಮೀಷನರ್‌ರವರಿಗೆ ಒಪ್ಪಿಸತಕ್ಕಂಥದ್ದು ತಪ್ಪುಗೆ ಇಟ್ಟಿದ್ದು. ಇದರ ಬಗ್ಗೆ ಸ್ಪಷ್ಟವಾದ ಆಶ್ವಾಸನೆಯನ್ನು ಕೊಟ್ಟರೆ ನಾವು ನೀವು ಮಾತನಾಡಿದ್ದು ನಡಿದಂತೆ ನಡೆದಂತಾಗುತ್ತದೆ.

ಶ್ರೀ ಬಸವಲಿಂಗಪ್ಪ—ಮಾನ್ಯ ವಿರೋಧಪಕ್ಷದ ನಾಯಕರು ಹೀಗೆ ಮಾಡಿ ಎಂದು ಬೇಳುತ್ತಿದ್ದಾರೆ. ಹಾಗಾಗದೆ ಹೋದರೆ ತೃಪ್ತಿಯಾಗುವುದಿಲ್ಲವೆಂದು ಕಾಣುತ್ತದೆ. ನಾನು ಲಾಯರ್ ಆಗಿದ್ದೇನೆ. ನೀವು ಲಾಯರ ಆಗಿದ್ದೀರಿ, ಕಾಸ್ ಆಫ್ ಆಕ್ಷನ್ ಮಾಡುವುದಕ್ಕಾಗುವುದಿಲ್ಲ. ಇದರು ನೋಟಿಫೈ ಮಾಡಲಿ ಪ್ರಯತ್ನ ಮಾಡಲಿ, ನನಗನಿಸುತ್ತದೆ ಆವರಿಗೆ ಮನವರಿಕೆಯಾಗಿದೆ ಎಂದು. ಎಲೆಕ್ಷನ್ ಕಮೀಷನರ್‌ರವರು ಕ್ಯಾಲೆಂಡರ್ ಆಫ್ ಇವೆಂಟ್ಸ್ ಹಾಕಲಿಕ್ಕೆ ಹೋಗುವುದಿಲ್ಲ ಎನ್ನುವುದು ನನ್ನ ಭಾವನೆ. ವಿರೋಧ ಪಕ್ಷದ ನಾಯಕರಲ್ಲಿಯೂ ಕೂಡ ಸರಿಯಾದ ಮಾಹಿತಿ ಇರಬಹುದು ಎಂದು ಭಾವಿಸುತ್ತೇನೆ. ಇಷ್ಟು ಬಿಟ್ಟರೆ ಮತ್ತೇನು ಇಲ್ಲ. ಇದಕ್ಕೆ ನಾವೆಲ್ಲರೂ ಒಪ್ಪಿದ್ದೇವೆ.

ಶ್ರೀ ಪಿ. ರಾಮದೇವ್—ಸಚಿವರು ಹೇಳುತ್ತಿರುವುದನ್ನು ನೋಡಿದರೆ ನನಗೆ ಸಂತಯುಬರುವ ಹಾಗೆ ಇದೆ.

ಶ್ರೀ ಭೀಮಣ್ಣ ಖಂಡ್ರೆ—ತಾವು ಏನು ಒಪ್ಪಿಕೊಂಡಿರುತ್ತೀರಿ ಅದನ್ನು ಇಲ್ಲಿ ಹೇಳಿ

ಶ್ರೀ ಬಿ. ಬಸವಲಿಂಗಪ್ಪ—ಎಲೆಕ್ಷನ್ ವಿಚಾರದಬಗ್ಗೆ ಕೆಲವೊಂದು ವಿಷಯಗಳನ್ನು ಬಹಿರಂಗವಾಗಿ ಹೇಳುವುದಕ್ಕೆ ಆಗುವುದಿಲ್ಲ. ನಾವು ಯಾವುದನ್ನು ಹೇಳಬೇಕೆಂದಿದ್ದೆವೋ ಅದನ್ನೆಲ್ಲ ಹೇಳಿದ್ದೇವೆ, ಬಹಿರಂಗವಾಗಿ ಹೇಳುವ ಪ್ರಶ್ನೆ ಬರುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಬೊಮ್ಮಾಯಿ ಯವರು ಮತ್ತು ಇನ್ನಿತರ ಸದಸ್ಯರೊಡನೆ ಮಾತನಾಡಿದ್ದೇವೆ. ನೀವು ಇಲ್ಲೇ ಹೇಳಿ ಎಂದು ದಯವಿಟ್ಟು ಒತ್ತಾಯಮಾಡಬೇಡಿ. ಏನು ಸಾಧನೆಯನ್ನು ಮಾಡಬೇಕೆಂದು ಇದ್ದೇವೋ ಅದನ್ನು ಮಾಡಿಕೊಳ್ಳೋಣ ಅದರಲ್ಲಿಯೇನು ಭಿನ್ನಾಭಿಪ್ರಾಯವಿಲ್ಲವೆಂದು ತೋಳಬಯಸುತ್ತೇನೆ.

MR. CHAIRMAN.—Now what I understand is, probably the Minister has made the statement and the Leader of the Opposition who is a party for the discussion held yesterday has also agreed it. The difference of opinion appears to be as to whether the Govern-ment or the opposition can correspond with the Election Commission whether it is legally permissible or not since the Election Commission is a statutory body The Minister has stated that we will try to solve the issue. Therefore, we shall close the matter. Now, let us take up the General Discussion on budget.

SRI S. R. BOMMAI.—What happened must be correctly reported. From the statement of the Hon.Minister what I have understood is so far as in principle the Government agrees that the Election to the Legislative Council from Local Authorities should be held after the elections are held to the Municipalities which are now postponed.

This is one point. Secondly, the Hon.Minister has said that the calender of events has not been published by the Election Commission and therefore no cause of action arise so far as making a request in some form or the other which is suitable or proper under the law. Normally, the Election Commission will send the calender of events to the Government for approval because it is the Government which provides the entire machinery for conducting the elections and also it is the Government which fix the date convenient and suitable. This is the normal practice adopted when Election Commission approaches either the State Government or the Central Government. I would like to have an assurance from the Government that when the cause of action arises, the Government either by letter or by request or by any other means must see that the elections to the local authorities are postponed till the municipal elections are held.

SRI B. BASAVALINGAPPA.—That is understood.

(Sri Bhimanna Khandre rose)

MR. CHAIRMAN.—If the Leader of the Opposition agrees that was the understanding, every body should be satisfied with that. We have discussed this matter enough and more so an assurance to the effect has been given by the Revenue Minister and the Leader of the Opposition has accepted it. We shall therefore proceed with the next item,

ಶ್ರೀ ಭೀಮಣ ಖಂಡ್ರೆ.—ಮಾನ್ಯ ಮಂತ್ರಿಗಳಿಂದ ಸೂಕ್ತವಾದ ಭರವಸೆ ನಮಗೆ ಬರಲಿಲ್ಲ. ವಿಧಾನ ಪರಿಷತ್ತಿನ ಚುನಾವಣೆ ಆದ ಮೇಲೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಆಗಬೇಕಾಗಿತ್ತು. ಇದನ್ನು ಮೊದಲು ಮಾಡಲಿ, ಆನಂತರ ಎರಡನೇ ಪ್ರಶ್ನೆ.

MR. CHAIRMAN.—I will not allow further discussion on this issue because the matter is treated as closed. I would therefore request the Hon. the Leader of the Opposition to commence the discussion on the budget.

Budget Estimates for 1978-79 General Discussion

†ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಧ್ಯಕ್ಷರೇ, ಅರ್ಥ ಮಂತ್ರಿಗಳು ಮಂಡಿಸಿದ ಈ ೭ ಯವ್ಯಯದ ಮೇಲೆ ಕೆಲವು ವಿಚಾರಗಳನ್ನು ಈ ಮೊದಲೇ ಹಿಂದಿನ ಅಧಿವೇಶನದಲ್ಲಿ ನಾನು ಹೇಳಿದ್ದೇನೆ, ಆನಂತರ ಎರಡು ತಿಂಗಳು ಕಳೆದಿದೆ, ಈಗ ಪುನಃ ವಿವರವಾದ ವಿಚಾರಗಳನ್ನು ಹೇಳಬಯಸುತ್ತಿದ್ದೇನೆ. ಮೊಟ್ಟಮೊದಲನೆಯದಾಗಿ ಈ ಎರಡು ತಿಂಗಳ ಅವಧಿಯಲ್ಲಿ ಸರ್ಕಾರ ನಡೆದಂತಹ ರೀತಿನೀತಿ ಕೈಕೊಂಡಂತಹ ಕಾರ್ಯಕ್ರಮದ ಮುನ್ಸೂಚನೆಯೆಂದು ನಾನು ತಿಳಿದುಕೊಂಡಿದ್ದೇನೆ. ಕಳೆದ ಆರು ವರ್ಷಗಳವರೆಗೆ ಈ ಪಕ್ಷ ಆಡಳಿತ ನಡೆಸಿದೆ, ಪುನಃ ಜನರು ಇವರನ್ನು ಅಧಿಕಾರಕ್ಕೆ ಚುನಾಯಿಸಿದ್ದಾರೆ. ಈ ಚುನಾವಣೆಗಳಾದ ಮೇಲೆ ಎರಡು ತಿಂಗಳಲ್ಲಿ ಯಾವ ರೀತಿ ನಡೆದುಕೊಂಡಿದ್ದಾರೆನ್ನುವುದು ಬಹಳ ಮಹತ್ವದ್ದು. ನಾನು ವಿರೋಧಪಕ್ಷದ ನಾಯಕನಾಗಿಯಾಗಲೀ ಸದಸ್ಯನಾಗಿಯಾಗಲೀ ಈ ಮಾತುಗಳನ್ನು ಹೇಳುತ್ತಿಲ್ಲ. ಈ ಮನೆಯ ಪ್ರತಿಯೊಬ್ಬ ಸದಸ್ಯರೂ ಕೂಡ ಸರ್ಕಾರದ ನೀತಿ ನಿಯಮಗಳನ್ನ ಚ್ಚರಿಕೆಯಿಂದ ಕಣ್ತೆರೆದು ನೋಡಿ ಹೇಳಬೇಕಾಗಿದೆ. ಮೊದಲನೆಯದಾಗಿ ಈ ರಾಜ್ಯದಲ್ಲಿ ಮಂತ್ರಿಮಂಡ